doc-522
T.P-2

Reg No B G 155 5 — 8 — 72

55th Year of Publication 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters



ರಾಜ್ಯದಲ್ಲಿ ಪ್ರಥಮ
ಸುವರ್ಣ ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ತಿರುಮಲೆ ಸಿರಸ್ತೇದಾರ್ ಎಂ ವಿ ಸುಬ್ಬರಾವ್ ಸಂಪಾದಕರು: ದಿವಂಗತ ಪ್ರೊಫೆಸರ್ ಎಂ. ಎಸ್. ಕೃಷ್ಣರಾವ್ [2 ಪೈಸೆ

ತಾಲೂ ಬೋರ್ಡುಗಳಿಗೆ ಅಧಿಕ ನೆರವು

ಅಬ್ದುಲ್ಲರ ಹೇಳಿಕೆ ಬಗ್ಗೆ ಪ್ರಧಾನಿಯರ ಟೀಕೆ

ನವದೆಹಲಿ— ಕಾಶ್ಮೀರದ ಅದೃಷ್ಟ ಇನ್ನೂ ನಿರ್ಧಾರವಾಗಬೇಕೆಂಬ ಷೇಕ್ ಅಬ್ದುಲ್ಲರ ಹೇಳಿಕೆಯು, ತಪ್ಪುಭಾವನೆಯ, ದುರ್ಮಂತ್ರಿತ, ಸತ್ಯಕ್ಕೆ ದೂರ ಮತ್ತು ಅಸಂಬದ್ಧವೆಂದು ಪ್ರಧಾನಿ ಇಂದಿರಾರವರು ಲೋಕಸಭೆಯಲ್ಲಿ ಹೇಳಿದರು.

★

ಗ್ರಾಂಟು ನಿಲ್ಲಿಸಲಾಗಿದೆ

ಗಾಂಧಿನಗರ — ಸಾರ್ವಜನಿಕ ನಲ್ಲಿಯಿಂದ ಹರಿಜನರು ನೀರು ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡದಿದ್ದುದಕ್ಕೆ 16 ಗ್ರಾಮಪಂಚಾಯಿತಿಗಳಿಗೆ ಗ್ರಾಂಟು ನಿಲ್ಲಿಸಲಾಯಿತೆಂದು ಗುಜರಾತು ಶಾಸನ ಸಭೆಯಲ್ಲಿ ತಿಳಿಸಲಾಯಿತು.

★

ಭ್ರಷ್ಟಾಚಾರ

ನವದೆಹಲಿ— ಕೇಂದ್ರ ತನಿಖಾ ಸಂಸ್ಥೆಯವರು ಗೊತ್ತಾದ ವರಮಾನ ಮೂಲಕ್ಕಿಂತಲೂ ರೂ 148000 ಕ್ಕಿಂತ ಅಧಿಕ ಸಂಪತ್ತಿಯನ್ನು ಹೊಂದಿದ್ದ ನೆಲೂರಿನ ವರಮಾನ ತೆರಿಗೆ ಅಧಿಕಾರಿಯನ್ನು ಶಿಕ್ಷೆಗೆ ಗುರಿಪಡಿಸಿದ್ದಾರೆ.

ಗಡಿ ವ್ಯಾಜ್ಯ

ನವದೆಹಲಿ— ಮೈಸೂರು ಮಹಾರಾಷ್ಟ್ರ ಮತ್ತು ಮೈಸೂರು-ಕೇರಳ ಗಡಿ ವ್ಯಾಜ್ಯ ಬಗ್ಗೆ ಮುಖ್ಯ ಮಂತ್ರಿಗಳೊಡನೆ ಚರ್ಚಿಸಿ ಪರಿಹರಿಸಬೇಕೆಂದು ಸರ್ಕಾರದ ಆಶಯವೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

●

ರೈತರ ಮೆರವಣಿಗೆ

ಬಿಜಾಪುರ ತಾಲ್ಲೂಕಿನಲ್ಲಿ ಅಭಾವ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ಒತ್ತಾಯ ಮಾಡುವುದಕ್ಕಾಗಿ, 1000 ರೈತರು ಜಿಲ್ಲಾಧಿಕಾರಿಗಳ ಕಚೇರಿಗೆ ಮೆರವಣಿಗೆಯಲ್ಲಿ ಹೋಗಿ, ಆಹಾರ ಬೆಲೆ ಏರಿಕೆ, ದನಕರುಗಳಿಗೆ ಮೇವು ಸಿಕ್ಕದಿರುವ ಬಗ್ಗೆ ದೂರಿತ್ತರು ; ಜಿಲ್ಲಾಧಿಕಾರಿಗಳು ಪರಿಪಡಿಸುವುದಾಗಿ ಭರವಸೆ ಇತ್ತರು.

★

ಯುವಕರ ದಿನೋತ್ಸವ

ಮೈಸೂರು— ಪುರಸಭೆಯವರು ತಾ|| 13 ಭಾನುವಾರ ಟೌನ್‌ಹಾಲ್‌ನಲ್ಲಿ ಯುವಕರ ದಿನೋತ್ಸವ ಏರ್ಪಡಿಸಿದ್ದಾರೆ: ವಿವಿಧ ಕಾರ್ಯಕ್ರಮಗಳಿವೆ.

ಪ್ರಪ್ರಥಮ ಹಿಂದೀ ತೀರ್ಪು

ಪಾಟ್ನಾ— ದೇಶದಲ್ಲಿ ಪ್ರಪ್ರಥಮ ಹಿಂದಿ ಭಾಷೆಯಲ್ಲಿನ ತೀರ್ಪನ್ನು ಬೀಹಾರ ಹೈ ಕೋರ್ಟು ಕೊಟ್ಟಿತು.

★

ಸಾವುಗಳು – ಬಂಧನಗಳು

ದಾವಣಗೆರೆ– ಇಲ್ಲಿ ಗಲಭೆ ಅಡಗಿಸಲು ನಡೆದ ಪೋಲೀಸು ಗೋಲೀಬಾರಿನಿಂದ 3 ಜನ ಸತ್ತಿರುವರು – 76 ಮಂದಿಯನ್ನು ಬಂಧಿಸಲಾಗಿದೆ – ಕಾರ್ಮಿಕರ ಹಿಂಸೆಯಿಂದ ನಿಧನರಾದ ಮಿಲ್ ಮ್ಯಾನೇಜರ್ ಶ್ರೀ ಬಿ ಪಿ. ಶೆಟ್ಟರ ಗೌರವಾರ್ಥವಾಗಿ ನಿನ್ನೆ ವಾಣಿಜ್ಯ ಸಂಸ್ಥೆಗಳು ಮುಚ್ಚಲ್ಪಟ್ಟಿದ್ದವು.

○

ಸಿನ್ಮಾ ಒಪ್ಪಂದ ಪ್ರತಿಭಟನೆ

ಹಾಸನ— ಸಿನ್ಮಾ ಒಪ್ಪಂದವನ್ನು ಪ್ರತಿಭಟಿಸಿ, ಜನಸಂಘದ ಕರೆಯಂತೆ ಗುರುವಾರ ಇಲ್ಲಿ ಪೂರ್ಣ ಹರತಾಳ ಆಚರಿಸಲಾಯಿತು – ವಿದ್ಯಾರ್ಥಿಗಳೂ ಜನಸಂಘದ ಕಾರ್ಯಕರ್ತರೂ ಘೋಷಣೆ ಕೂಗುತ್ತಾ ಮೆರವಣಿಗೆ ನಡೆಸಿದರು.

ಸಂತಾನನಿರೋಧ ಗ್ರಾಮ

ನವದೆಹಲಿ— ಮಧ್ಯಪ್ರದೇಶದ ಪಿಪಾಲಿಯಾಗ್ರಾಮವು ಕುಟುಂಬ ಯೋಜನೆಯನ್ನು ತನ್ನ ಜೀವಿತದ ಸರ್ವಸ್ವ ಮಾಡಿಕೊಂಡಿದೆ – ಅಲ್ಲಿಯ ಎಲ್ಲ 388 ದಂಪತಿಗಳೂ ಸಂತಾನಹರಣ ಚಿಕಿತ್ಸೆ ಪಡೆದಿದಾರೆ

ದಿವ್ಯವಾಣಿ

ವ್ಯರ್ಥವಾದ ಉತ್ತರ ಕೋಪವನ್ನು ಪರಿಹರಿಸುತ್ತದೆ ; ಘೋರವಾದ ಮಾತುಗಳು ಕೋಪವನ್ನು ಹುಟ್ಟಿಸುತ್ತದೆ.

— ಬೈಬಲ್

ಭೂ ಪರಿಮಿತಿ

ಬೆಂಗಳೂರು — ಶಾಸನ ಸಭೆಯಲ್ಲಿ ಮಂಡಿಸಲ್ಪಡುವ ಭೂಸುಧಾರಣಾ ಹುಸೂದೆಯಲ್ಲಿ, 2 ಬೆಳೆಯ ಭೂಮಿಗೆ 10 ಎಕ್ರೆ, 1 ಬೆಳೆಯ ಭೂಮಿಗೆ 18 ಎಕ್ರೆ, ನಿರಾವರಿ ಭರವಸೆಯಿಲ್ಲದ ಭೂಮಿಗೆ 27 ಎಕ್ರೆ, ಒಣ ಭೂಮಿಗೆ 54 ಎಕ್ರೆ ಪರಿಮಿತಿ ಇದೆ.

ತಾಲೋಕು ಬೋರ್ಡುಗಳಿಗೆ ನೆರವು

ಬೆಂಗಳೂರು— ಭೂ ಕಂದಾಯದಲ್ಲಿ ತಾಲ್ಲೂಕು ಬೋರ್ಡುಗಳಿಗೆ ಹೆಚ್ಚು ಭಾಗ ಕೊಡುವ ವಿಷಯ ಪರ್ಯಾಲೋಚಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ಶಾಸನಸಭೆಯಲ್ಲಿ ತಿಳಿಸಿದರು – ಆದರೆ ಅಬ್ಕಾರಿ ಆದಾಯದಲ್ಲಿ ಕೊಡಲು ಸಾಧ್ಯವಿಲ್ಲವೆಂದು ಹೇಳಿದರು.

ರೂಪಾಯಿನ ಕೊಳ್ಳುವ ಶಕ್ತಿ

ನವದೆಹಲಿ — ಈಗ ರೂಪಾಯಿನ ಕೊಳ್ಳುವ ಶಕ್ತಿಯು 1969 ರಲ್ಲಿದ್ದುದರ ಶೇಕಡಾ 42.4 ಇದೆಯೆಂದು ಅರ್ಥ ಮಂತ್ರಿ ಶ್ರೀ ಚವ್ಹಣರು ಲೋಕಸಭೆಯಲ್ಲಿ ಹೇಳಿದರು

ಮರಣದಂಡನೆ

ನವದೆಹಲಿ— ಪಾರ್ಲಿಮೆಂಟಿನ ಅನೇಕ ಸದಸ್ಯರು ಮರಣದಂಡನೆ ಇರಬೇಕೆಂದೇ ಹೇಳತಾರೆ ; ಒಂದು ಜೀವಕ್ಕೆ ಒಂದು ಜೀವ, ಎನ್ನುವದು ಎಲ್ಲರಿಗೂ ಉತ್ತಮ ನ್ಯಾಯವೆನ್ನುತ್ತಾರೆ – ಆದರೆ ಸ್ವತಂತ್ರ ಪಕ್ಷದ ಶ್ರೀ ದಯಾಭಾಯ್ ಪಟೇಲರು, ಮಾನವನು ಜೀವ ಕೊಡಲಾರದವನಾಗಿರುವುದರಿಂದ ಜೀವ ತೆಗೆಯಲು ಅಧಿಕಾರವಿಲ್ಲ ಎಂದು ಹೇಳಿ, ಜೀವಾವಧಿ ಶಿಕ್ಷೆ ವಿಧಿಸಬಹುದೆಂದಿದಾರೆ.

ಪ್ರಾಣಿಸಂಗ್ರಹಾಲಯ

ಮೈಸೂರು ರಾಜ್ಯ ಸರಕಾರವು ಹನ್ನೆರಡು ಜಿಲ್ಲೆಗಳಲ್ಲಿ ಮಕ್ಕಳಿಗಾಗಿ ಪ್ರಾಣಿ ಸಂಗ್ರಹಾಲಯವನ್ನು ಸ್ಥಾಪಿಸಲಿದೆ

ಮೈಸೂರು ಇರ್ವಿನ್ ರಸ್ತೆಯಲ್ಲಿರುವ ಭವ್ಯವಾದ
ಕಟ್ಟಡದಲ್ಲಿ
9 ನೇ ಆಗಸ್ಟ್ 72 ರ ಮಧ್ಯಾಹ್ನಾತ್ಪರ 4 ಗಂಟೆಗೆ
ಹೊಟೇಲ್ ಬಿಲಾಲ್‌ನ್ನು
ಮೈಸೂರು ರಾಜ್ಯದ ಸಾರಿಗೆ ಮಂತ್ರಿಯವರಾದ -
ಜನಾಬ್ ಅಜೀಜ್ ಸೇಟ್
ಅವರು ಕೃಪೆಯಿಟ್ಟು ಉದ್ಘಾಟಿಸಲು ಒಪ್ಪಿರುವರೆಂದು ತಿಳಿಸಲು
ಹರ್ಷವಾಗುತ್ತದೆ
ಎಂ. ಅಬ್ದುಲ್ ರಜಾಕ್, ಮಾಲೀಕರು

ಕೂದಲಿಗೂ ಒಂದು ತೆರಿಗೆ

ಫಿಲಿಪೈನ್ಸ್ ದ್ವೀಪದ ಮಲೈಬಲೈ ಪಟ್ಟಣದ ನಗರ ಸಭೆಯು ಏಪ್ರಿಲ್ 72 ರಂದು ಉದ್ದ ಕೂದಲಿನ ಗಂಡಸರ ಮೇಲೆ 5 " ಪೈಸೊ " ಗಳನ್ನು (0·78 ಅಮೇರಿಕ ಡಾಲರಿಗೆ ಸಮ) ತೆರಿಗೆಯನ್ನು ವಿಧಿಸಿದೆ : ಈ ತೆರಿಗೆಯನ್ನು ಸಲ್ಲಿಸದೆ ಇರುವವರಿಗೆ 2 ದಿನಸೆರೆಮನೆ ವಾಸ ಮತ್ತು 10 ಪೆಸೋ ಜುಲ್ಮಾನೆ ವಿಧಿಸಲಾಗುತ್ತದೆ.

★

ನುಂಗುವುದರಲ್ಲೂ ಒಂದು ದಾಖಲೆ

ಇಂಗ್ಲೆಂಡಿನ ಸ್ಕಾರ್‌ಬೆರೋ ಪಟ್ಟಣದ ಮಹಾಪೌರ ಪೀಟರ್ ಜಾಕೋಸೆಲ್ಲಿಯು ಸ್ಥೂಲಕಾಯದ ವ್ಯಕ್ತಿ : ಆತನ ತೂಕ 127 ಕಿಲೋಗ್ರಾಂ. ಇತ್ತೀಚೆಗೆ ಆತನು 48 ನಿಮಿಷಗಳಲ್ಲಿ 500 ಮೃದ್ವಂಗಿ ಸಿಂಪಿಗಳನ್ನು (ಆಯಸ್ಟರ್ಸ್) ಗಳನ್ನು ನುಂಗಿದನು. ತನ್ನ ಅಧಿಕಾರಾವಧಿಯು ಮೇ ತಿಂಗಳಲ್ಲಿ ಮುಗಿಯುವುದಕ್ಕೆ ಮೊದಲೇ ತನ್ನ ಪಟ್ಟಣಕೊಂದು ದಾಖಲೆಯ ಸ್ಥಾನವನ್ನು ನೀಡುವುದಕ್ಕಾಗಿಯೇ ತಾನು ಹಾಗಿ ನುಂಗಿದುದಾಗಿ ಅವನು ತಿಳಿಸಿದನು.

★

ದಿವ್ಯವಾಣಿ

ದೇವರು ಮನುಷ್ಯನಾಗಿದ್ದಾನೆ ; ಮನುಷ್ಯನು ಪುನಃ ದೇವರಾಗುತ್ತಾನೆ ; ನೀನು ನಿನ್ನನ್ನು ನಂಬುವವರೆಗೆ ದೇವರನ್ನು ನಂಬಲಾರೆ. — ಸ್ವಾಮಿ ವಿವೇಕಾನಂದರು

Quality Printing & Neat Binding

Lakshminarasimha Press

Sivarampet, Mysore

SHAKTI SUDHA

A Superb Tonic

Help The Gorakshana

— Humanitarian Propoganda Monthly ....

Edited Printedand Published by Dharmapracharanirata M S Krishna Rao (Proprietor) at the Satvavadi Press Chamarajapuram Mysore

ವುಡ್‌ಲ್ಯಾಂಡ್ 4-8-72ರಿಂದ ಅಮೋಘ **14ನೇವಾರ**

.... ಚಿತ್ತಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ

ನಿರ್ದೇಶನ : ರಾಜಶ್ರೀ ಸಹೋದರರು ನಿರ್ಮಾಪಕರು : ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಕಣ್ತೆರದು ನೋಡು

ಅಪೂರ್ವ 2 ನೇ ವಾರ

ಫಿಲಂ ಲ್ಯಾಂಡ್‌ರವರ ಮಹೋನ್ನತ ಹಿಂದಿ ಚಿತ್ರ

ಬನ್ ಪೂಲ್

ಪಾತ್ರ : ಜಿತೇಂದ್ರ, ಬಬಿತ

ದಿಗ್ದರ್ಶನ : ವಿಜಯಭಟ್ ಸಂಗೀತ : ಲಕ್ಷ್ಮೀಕಾಂತ್ ಪ್ಯಾರೇಲಾಲ್

ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್‌ರವರ ಜೊಚ್ಚಲು ಚಿತ್ರ

ಅನೆ-ಹುಡುಗ



Protect the Cow

Contribute Liberally to the National Defence Fund